**<u>ದಿನಾಂಕಃ 14.08.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ ಪ್ರತಿ**ವಾದಿ ಪರ** ಶ್ರೀ ಬಿ ಎಮ್ ಎನ್ **ವಕೀಲರಿಂದಃ**</u>

ನಾನು 8 ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ತಂದೆ ಕೃಷ್ಣೇಗೌಡರವರು ನಮ್ಮ ಜೊತೆಯಲ್ಲಿ ಉನಗನಹಳ್ಳಿ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ಈ ದಾವೆಯನ್ನು ನನ್ನ ತಂದೆಯವರು ಸಲ್ಲಿಸಿರುತ್ತಾರೆ. ನನ್ನ ತಂದೆಯು ಯಾರ ಯಾರ ವಿರುದ್ಧ ಈ ದಾವೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯು ಈ ದಾವೆಯನ್ನು ಸರ್ವೆ ನಂಬರ್ 8/9 ಎ ರ 32 ಗುಂಟೆ ವಿಸ್ತೀರ್ಣಕ್ಕೆ ಸಲ್ಲಿಸಿರುತ್ತಾರೆ. ಈ ದಾವೆ ಸಲ್ಲಿಸಿದ ನಂತರ ವಾದಿ ನನ್ನ ತಂದೆಯವರು ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದರು ಎಂದರೆ ಸರಿ. ಈ ದಾವೆಯನ್ನು ಸಲ್ಲಿಸಲು ನನ್ನ ತಂದೆಯೇ ಮಾಹಿತಿ ನೀಡಿರುತ್ತಾರೆ. ನನ್ನ ತಂದೆಯು ಈ ದಾವೆಯಲ್ಲಿ ನಾನು ಸಾಕ್ಷ್ಯ ನುಡಿಯಲು 2019 ರಲ್ಲಿ ಅಧಿಕಾರ ಪತ್ರ ನೀಡಿರುತ್ತಾರೆ. ನನ್ನ ತಂದೆಗೆ ಅನಾರೋಗ್ಯ ಇರುವ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ನನ್ನ ತಂದೆಯನ್ನು ಆಸ್ಪತ್ರೆಯಲ್ಲಿ ಪರೀಕ್ಷಿಸಿರುವುದಿಲ್ಲ. ನನ್ನ ತಂದೆಯು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದರೆ ಸತ್ಯ ತಿಳಿಯುತ್ತದೆ ಎಂಬ ದುರುದ್ದೇಶದಿಂದ ನಾನು ಈ ದಾವೆಯಲ್ಲಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಯ ತಂದೆಯ ಹೆಸರು ಮಾದೇಗೌಡ ಯಾನೆ ಕುಪನಿಗೌಡ. ಸದರಿ ಮಾದೇಗೌಡ ಯಾನೆ ಕುಪನಿಗೌಡರವರು ನನ್ನ ತಾತ. ಸದರಿ ನನ್ನ ತಾತನಿಗೆ ಒಟ್ಟು ಐದು ಜನ ಮಕ್ಕಳು. ಅವರೆಂದರೆ ಲಿಂಗೇಗೌಡ, ಲಿಂಗಮ್ಮ, ಮಾದೇಗೌಡ, ಕೃಷ್ಣೇಗೌಡ ಮತ್ತು ಮಾದಮ್ಮ. ಸದರಿಯವರಲ್ಲಿ ಲಿಂಗೇಗೌಡ, ಲಿಂಗಮ್ಮ, ಮಾದೇಗೌಡ ರವರು ಮರಣ ಹೊಂದಿರುತ್ತಾರೆ. ಸದರಿ ಲಿಂಗೇಗೌಡ, ಲಿಂಗಮ್ಮ, ಮಾದೇಗೌಡ ರವರ ವಾರಸುದಾರರು ಇರುತ್ತಾರೆ. ನನ್ನ ತಾತ ಮಾದೇಗೌಡ ಯಾನೆ ಕುಪನಿಗೌಡರವರ ವಂಶವೃಕ್ಷವನ್ನು ತಹಸಿಲ್ದಾರ್ ಕಛೇರಿಯಿಂದ ಪಡೆದು ಹಾಜರು ಪಡಿಸಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತನ್ನು ನನ್ನ ತಾತ

ಮಾದೇಗೌಡರವರು ಕ್ರಯ ಪತ್ರದ ಮೂಲಕ ಚಾಮಯ್ಯ ಮತ್ತು ವೆಂಕಟಯ್ಯರವರಿಂದ ಖರೀದಿಸಿರುತ್ತಾರೆ. ಆದರೆ ದಿನಾಂಕ ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರದ ಮೂಲಕ ನಮ್ಮ ತಾತ ಸರ್ವೆ ನಂಬರ್ 8/9 ರಲ್ಲಿ 36 ಗುಂಟೆ ವಿಸ್ತೀರ್ಣದ ಜಮೀನನ್ನು ಖರೀದಿಸಿರುತ್ತಾರೆ. ನನ್ನ ವಾದ ಪತ್ರದಲ್ಲಿ ಸರ್ವೆ ನಂಬರ್ 8/9 ರಲ್ಲಿ 18 ಗುಂಟೆ ವಿಸ್ತೀರ್ಣದ ಆಸ್ತಿಯನ್ನು ನನ್ನ ತಾತ ಖರೀದಿಸಿದ್ದಾರೆ ಎಂದು ನಮೂದಿಸಿರುವುದು ತಪ್ಪಾಗಿರುತ್ತದೆ. ದಿನಾಂಕ 22.05.1961 ರ ಕ್ರಯ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ದಿನಾಂಕ 22.05.1961 ರ ಕ್ರಯ ಪತ್ರದ ಮೂಲಕ ನನ್ನ ತಾತ ಮಾದೇಗೌಡರವರು ಸರ್ವೆ ನಂಬರ್ 8/9 ರಲ್ಲಿ 36 ಗುಂಟೆಯನ್ನು ಖರೀದಿಸಿರುತ್ತಾರೆ. ಸದರಿ ಜಮೀನು ನನ್ನ ತಾತನ ಹೆಸರಿಗೆ ದಾಖಲಾದ ಬಗ್ಗೆ ಕಂದಾಯ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ. ನನ್ನ ತಂದೆ ಮತ್ತು ಅವರ ಸಹೋದರರ ನಡುವೆ 1984 ರಲ್ಲಿ ವಿಭಾಗವಾಗಿರುತ್ತದೆ. ಆದರೆ ವಿಭಾಗವಾದ ನಿರ್ಧಿಷ್ಟ ದಿನಾಂಕ ನನಗೆ ಗೊತ್ತಿಲ್ಲ. ಸದರಿ ವಿಭಾಗವು ನೊಂದಾಯಿತ ವಿಭಾಗ ಪತ್ರದ ಮೂಲಕ ಆಗಿರುತ್ತದೆ. ಸದರಿ ನೊಂದಾಯಿತ ವಿಭಾಗ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತೇನೆ. ನಾನು ಹೇಳಿದಂತೆ ಯಾವುದೇ ವಿಭಾಗ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-34 ರಲ್ಲಿ ಐ.ಎನ್.ಹೆಚ್ 22/1983-84 ರ ಪ್ರತಿ ಲಭ್ಯವಿಲ್ಲ ಎಂದು ಹಿಂಬರಹ ನೀಡಿದ್ದಾರೆ ಎಂದರೆ ಸರಿ. ಸದರಿ ವಿಭಾಗದಲ್ಲಿ ಯಾರು ಯಾರಿಗೆ ಯಾವ ಯಾವ ಜಮೀನು ಹೋಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ನನ್ನ ತಂದೆಯ ಇಬ್ಬರು ಸಹೋದರಿಯರಿಗೆ ಯಾವುದೇ ಜಮೀನು ನೀಡಿಲ್ಲ. ಸದರಿ ವಿಭಾಗದ ಮೂಲಕ ನನ್ನ ತಂದೆಯ ಭಾಗಕ್ಕೆ ಸರ್ವೆ ನಂಬರ್ 8 ರಲ್ಲಿ 27 ಗುಂಟೆ ಜಮೀನು, ಸರ್ವೆ ನಂಬರ್ 8/9 ಎ ರಲ್ಲಿ 32 ಗುಂಟೆ ಜಮೀನು ಬಂದಿರುತ್ತದೆ. ವಾದ ಪತ್ರದಲ್ಲಿ ನನ್ನ ತಂದೆಯ ಭಾಗಕ್ಕೆ ಸರ್ವೆ ನಂಬರ್ 8/9 ಎ ರಲ್ಲಿ 27 ½ ಗುಂಟೆ ಜಮೀನು ಬಂದಿದೆ ಎಂದು ನಮೂದಿಸಿರುವುದು ಸರಿಯಾಗಿದೆ. ಸದರಿ ಸರ್ವೆ ನಂಬರ್ 8/9 ಎ ರಲ್ಲಿ ನಂಜೇಗೌಡ ಎಂಬುವವರಿಗೆ 4 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇವೆ.

ನಿಪಿ-32 ರಲ್ಲಿ 18 ಗುಂಟೆ ಮಾರಾಟವಾಗಿದೆ ಎಂದು ನಮೂದಾಗಿರುವುದು ಸುಳ್ಳಾಗಿರುತ್ತದೆ. ನನ್ನ ತಂದೆಯ ಭಾಗಕ್ಕೆ ಸರ್ವೆ ನಂಬರ್ 8/9 ಎ ರಲ್ಲಿ 32 ಗುಂಟೆ ಜಮೀನು ಬಂದಿದೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ. ಸರ್ವೆ ನಂಬರ್ 8/9 ಎ ರಲ್ಲಿ ನಾನು ಹೇಳಿದಂತೆ 32 ಗುಂಟೆ ಅಥವಾ 36 ಗುಂಟೆ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ಕ್ರಯ ಪತ್ರವನ್ನು ಹಾಜರು ಪಡಿಸಿರುತ್ತೇನೆ. ನಾನು ಹೇಳಿದಂತೆ ನನ್ನ ತಂದೆ ಮತ್ತು ಅವರ ಸಹೋದರರ ನಡುವೆ ಯಾವುದೇ ವಿಭಾಗವಾಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಅನುಸೂಚಿ ಸ್ವತ್ತು ನನ್ನ ತಂದೆಯ ಭಾಗಕ್ಕೆ ಬಂದಿದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯದಲ್ಲಿ ಹಾಜರಾಗಿರುವ ಚೆನ್ನೇಗೌಡರವರು ಈ ದಾವೆಯ 1 ನೇ ಪ್ರತಿವಾದಿ ಎಂದರೆ ಸರಿ. ವಾದ ಪತ್ರದಲ್ಲಿ ನಮೂದಾಗಿರುವಂತೆ 1 ನೇ ಪ್ರತಿವಾದಿಯು ನಮ್ಮ ಅನುಮತಿಯ ಮೇಲೆ ದಾವಾ ಅನುಸೂಚಿ ಸ್ವತ್ತಿನ ಸ್ವಾಧೀನತೆ ಹೊಂದಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು, ಆದರೆ 1 ನೇ ಪ್ರತಿವಾದಿಯು ದಾವಾ ಅನುಸೂಚಿ ಸ್ವತ್ತಿನಲ್ಲಿ ಸ್ವಾಧೀನತೆ ಹೊಂದಿದ್ದಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ದಾವಾ ಅನುಸೂಚಿ ಸ್ವತ್ತಿನಲ್ಲಿ 2002 ರಿಂದ ಸ್ವಾಧೀನತೆ ಹೊಂದಿರುತ್ತಾರೆ. ದಾವಾ ಅನುಸೂಚಿ ಸ್ವತ್ತಿನ ಪೂರ್ತಿ ಆಸ್ತಿಯು 1 ನೇ ಪ್ರತಿವಾದಿಯ ಸ್ವಾಧೀನತೆಯಲ್ಲಿ ಇರುತ್ತದೆ. 2018 ರಲ್ಲಿ ದಾವಾ ಅನುಸೂಚಿ ಸ್ವತ್ತಿನಲ್ಲಿ 2 ರಿಂದ 4 ನೇ ಪ್ರತಿವಾದಿಗಳು ಮನೆಯನ್ನು ನಿರ್ಮಿಸಿರುತ್ತಾರೆ. ಸಾಕ್ಷಿದಾರರಿಗೆ ಒಂದು ಭಾವ ಚಿತ್ರವನ್ನು ತೋರಿಸಲಾಗಿ ಸಾಕ್ಷಿದಾರರು ಅದನ್ನು ನೋಡಿ ಒಪ್ಪಿ ಕೊಂಡಿದ್ದರಿಂದ ಅದನ್ನು ನಿಡಿ-1 ಎಂದು, ಸಿಡಿಯನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-1 ರ ಮನೆಯಲ್ಲಿ 1 ನೇ ಪ್ರತಿವಾದಿಯ ದನಕರುಗಳನ್ನು ಕಟ್ಟಿ ಹಾಕುತ್ತಾರೆ. ನಿಡಿ-1 ರ ಮನೆಯಲ್ಲಿ ಪ್ರತಿವಾದಿಯು ಸ್ವಾಧೀನತೆ ಹೊಂದಿರುತ್ತಾರೆ. ದಾವಾ ಅನುಸೂಚಿ ಸ್ವತ್ತಿನಲ್ಲಿ 2 ರಿಂದ 4 ನೇ ಪ್ರತಿವಾದಿಗಳು ಮನೆ ನಿರ್ಮಿಸಿರುವ ಬಗ್ಗೆ ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತಿನಲ್ಲಿ ಮನೆ ಇರುವ ಬಗ್ಗೆ ಮತ್ತು ಸದರಿ ಮನೆಯಲ್ಲಿ 1 ನೇ ಪ್ರತಿವಾದಿಯು ಸ್ವಾಧೀನತೆ ಹೊಂದಿರುವ ಬಗ್ಗೆ ವಾದ ಪತ್ರದಲ್ಲಿ ನಮೂದಿಸಿರುತ್ತೇವೆ. ಸಾಕ್ಷಿದಾರರಿಗೆ

ಮತ್ತೊಂದು ಭಾವ ಚಿತ್ರವನ್ನು ತೋರಿಸಲಾಗಿ ಸಾಕ್ಷಿದಾರರು ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಸದರಿ ನಿಡಿ-3 ರಲ್ಲಿ ಕಾಣುವ ರಸ್ತೆಯ ಉತ್ತರಕ್ಕೆ ಮನೆ ಬರುತ್ತದೆ. ನಿಡಿ-1 ರಲ್ಲಿ ಕಾಣುವ ಮನೆಗೆ 1 ನೇ ಪ್ರತಿವಾದಿಯು ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ಕಾಣುವ ಮನೆಗೆ ವಿದ್ಯುತ್ ಸಂಪರ್ಕ ಇದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಅನುಸೂಚಿ ಸ್ವತ್ತಿನಲ್ಲಿ ಈಗ ಎರಡು ಮನೆಗಳು ಇರುತ್ತವೆ. ದಾವಾ ಅನುಸೂಚಿ ಸ್ವತ್ತು ಗ್ರಾಮ ಠಾಣಾ ವ್ಯಾಪ್ತಿಗೆ ಹೊಂದಿಕೊಂಡಂತೆ ಇರುತ್ತದೆ ಎಂದರೆ ಸರಿ. ದಿನಾಂಕ 15.08.1990 ರಂದು ನನ್ನ ತಂದೆ ವಾದಿಯು ನೊಂದಾಯಿತವಲ್ಲದ ಕ್ರಯ ಪತ್ರದ ಮೂಲಕ ಸರ್ವೆ ನಂಬರ್ 8/9 ಎ ರಲ್ಲಿ 4 ಗುಂಟೆ ವಿಸ್ತೀರ್ಣದ ಆಸ್ತಿಯನ್ನು ಮಾರಾಟ ಮಾಡಿ ಕ್ರಯ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪೂರ್ವಕ್ಕೆ ಕಾಲುವೆ, ಪಶ್ಚಿಮಕ್ಕೆ ನಿಂಗೇಗೌಡರವರ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ವೆಂಕಟೇಶ್ ರವರ ಮನೆ, ಈ ಚೆಕ್ಕು ಬಂದಿ ಒಳಗಿನ ಆಸ್ತಿಯಲ್ಲಿ 1 ನೇ ಪ್ರತಿವಾದಿ ಸ್ವಾಧೀನತೆ ಹೊಂದಿದ್ದಾರೆ ಎಂದರೆ ಸರಿ. ಸದರಿ ಚೆಕ್ಕು ಬಂದಿಯ ಒಳಗಿನ ಆಸ್ತಿಯಲ್ಲಿ ನಿಡಿ-1 ರ ಮನೆಯೂ ಕೂಡ ಇರುತ್ತದೆ ಎಂದರೆ ಸರಿ.

ದಾವಾ ಅನುಸೂಚಿ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ ಸರ್ಕಾರಿ ಓಣಿ, ಪಶ್ಚಿಮಕ್ಕೆ ನಂಜೇಗೌಡರವರ ಮನೆ, ಉತ್ತರಕ್ಕೆ ಸರ್ಕಾರಿ ಹಳ್ಳ, ದಕ್ಷಿಣಕ್ಕೆ ಯಾಲಕ್ಕಿಗೌಡರವರ ಜಮೀನು ಬರುತ್ತದೆ. ಸದರಿ ಚೆಕ್ಕು ಬಂದಿಯ ಒಳಗೆ ನಾನು 32 ಗುಂಟೆ ವಿಸ್ತೀರ್ಣದ ಜಮೀನು ನಮ್ಮದು ಎಂದು ಈ ದಾವೆ ಸಲ್ಲಿಸಿರುತ್ತೇವೆ. ನಿಡಿ-1 ರ ಮನೆ ಮತ್ತು ಅಕ್ಕ ಪಕ್ಕದಲ್ಲಿರುವ ಖಾಲಿ ಜಾಗವು 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ಕಾಣುವ ಮನೆಯನ್ನು ಸುಮಾರು 34 ವರ್ಷಗಳ ಹಿಂದೆ ನಿರ್ಮಿಸಿದ್ದಾರೆ ಎಂದರೆ ಸಾಕ್ಷಿದಾರರು ಸುಮಾರು 20 ವರ್ಷವಾಗಿದೆ ಎಂದು ನುಡಿಯುತ್ತಾರೆ. ಸದರಿ ನಿಡಿ-1 ರ ಮನೆಯಲ್ಲಿ 1 ನೇ ಪ್ರತಿವಾದಿಯು ಹಸುಗಳನ್ನು, ಕರುಗಳನ್ನು, ಕುರಿಗಳನ್ನು ಮತ್ತು ಮೇಕೆಗಳನ್ನು ಕಟ್ಟಿ ಹಾಕುತ್ತಿದ್ದಾರೆ ಎಂದರೆ ಸಾಕ್ಷಿದಾರರು ಬರೀ ಹಸುಗಳನ್ನು ಮಾತ್ರ ಕಟ್ಟಿ ಹಾಕುತ್ತಿದ್ದಾರೆ ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿ ಕಾಣುವ

ಮನೆಯನ್ನು 1 ನೇ ಪ್ರತಿವಾದಿಯು 1990 ರಲ್ಲಿ ಪಂಚಾಯತಿಯಿಂದ ಪರವಾನಗಿ ಪಡೆದು ಮನೆಯನ್ನು ನಿರ್ಮಿಸಿ ಅಂದಿನಿಂದಲೂ ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ.

ನಮ್ಮ ಗ್ರಾಮದ ವೆಂಕಟೇಶ ಮತ್ತು ಶ್ರೀಕಂಠೇಗೌಡರವರು ಸಹೋದರರು ಎಂದರೆ ಸರಿ. ಸದರಿಯವರ ತಂದೆಯ ಹೆಸರು ನಂಜೇಗೌಡ. ದಾವಾ ಅನುಸೂಚಿ ಸ್ವತ್ತಿನಲ್ಲಿ 2 ನೇ ಪ್ರತಿವಾದಿಯು ಒಂದು ಆರ್ ಸಿ ಸಿ ಮನೆಯನ್ನು ನಿರ್ಮಿಸಿದ್ದಾರೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತಿನಲ್ಲಿ ಶ್ರೀಕಂಠೇಗೌಡ ಎಂಬುವವರು ಒಂದು ಆರ್ ಸಿಸಿ ಮನೆಯನ್ನು ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. ಪೂರ್ವಕ್ಕೆ ನಿಂಗೇಗೌಡರವರ ಮನೆ, ಪಶ್ಚಿಮಕ್ಕೆ ವೆಂಕಟೇಗೌಡರವರ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ವೆಂಕಟೇಶ್ ರವರ ಜಮೀನಿನ ಚೆಕ್ಕು ಬಂದಿಯ ಒಳಗೆ ಶ್ರೀಕಂಠೇಗೌಡರವರ ಆರ್ ಸಿಸಿ ಮನೆ ಬರುತ್ತದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಸದರಿ ವೆಂಕಟೇಶ್ ಮತ್ತು ಶ್ರೀಕಂಠೇಗೌಡರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತಿನ ಮೇಲೆ ನಮಗೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇಲ್ಲದೇ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತಿನಲ್ಲಿ ಸರ್ಕಾರಿ ವತಿಯಿಂದ ಒಂದು ರಸ್ತೆಯನ್ನು ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ.

ಈ ದಾವೆಯ ಸಂಬಂದವಾಗಿ ನಾನು ಗ್ರಾಮ ಪಂಚಾಯತಿಗೆ ಅರ್ಜಿಯನ್ನು ನೀಡಿರುತ್ತೇನೆ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಖಾತೆಯನ್ನು ವರ್ಗಾಯಿಸಬೇಡಿ ಎಂದು ನಾನು ಅರ್ಜಿ ಸಲ್ಲಿಸಿರುತ್ತೇನೆ. ನಾನು ಹಾಜರು ಪಡಿಸಿರುವ ದಾಖಲಾತಿಗಳ ಪ್ರಕಾರ ಸರ್ವೆ ನಂಬರ್ 8/9 ಎ ರಲ್ಲಿ ನನ್ನ ತಂದೆ ವಾದಿಯ ಹೆಸರಿಗೆ 32 ಗುಂಟೆ ವಿಸ್ತೀರ್ಣದ ಖಾತೆ ಇರುತ್ತದೆ. ನಾನು ಹೇಳಿದಂತೆ ಸದರಿ ವಿಸ್ತೀರ್ಣ ನನ್ನ ತಂದೆಯ ಹೆಸರಿನಲ್ಲಿ ದಾಖಲಾಗಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ದಾಖಲಾತಿಗಳಿಗೂ ಮತ್ತು ದಾವಾ ಅನುಸೂಚಿ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸ್ವಾಧೀನತೆ ಹೊಂದಿರುವ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**OS-68/2018**
**PW-1**

<u>ಮರುವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ